ಕರ್ನಾಟಕ ವಿಧಾನ ಪರಿಷತ್ತು

1	ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ	1172
2	ಸದಸ್ಯರ ಹೆಸರು	ಶ್ರೀ ಎಂ.ಎ.ಗೋಪಾಲಸ್ವಾಮಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ)
3	ಉತ್ತರಿಸಬೇಕಾದ ದಿನಾಂಕ	22.09.2021
4	ಉತ್ತರಿಸುವ ಸಚಿವರು	ಕಂದಾಯ ಸಚಿವರು

ಕ್ರ.ಸಂ.	ಪ್ರಶ್ನೆ	ಉತ್ತರ
ಅ)	ಕಳೆದ 3 ವರ್ಷಗಳಿಂದ ಹಾಸನ ಜಿಲ್ಲೆಯಲ್ಲಿ ಪೋಡಿಗಾಗಿ ಸಲ್ಲಿಕೆಯಾಗಿರುವ ಅರ್ಜಿ ಗಳೆಷ್ಟು; ಇದರಲ್ಲಿ ಎಷ್ಟು ಅರ್ಜಿಗಳನ್ನು ವಿಲೇವಾರಿ ಮಾಡಲಾಗಿದೆ; ಬಾಕಿ ಇರುವ ಅರ್ಜಿ ಗಳೆಷ್ಟು; ಬಾಕಿ ಇರುವ ಅರ್ಜಿಗಳನ್ನು ಯಾವಾಗ ವಿಲೇ ಮಾಡಲಾಗುವುದು; (ಹೋಬಳಿವಾರು ಮತ್ತು ತಾಲ್ಲೂಕುವಾರು ವಿವರ ನೀಡುವುದು)	ಕಳೆದ 3 ವರ್ಷಗಳಿಂದ ಹಾಸನ ಜಿಲ್ಲೆಯಲ್ಲಿ ತತ್ಕಾಲ್ ಪೋಡಿಗಾಗಿ ಸಲ್ಲಿಕೆಯಾಗಿರುವ ಅರ್ಜಿಗಳ ಪ್ರಗತಿ ವಿವರವನ್ನು **ಅನುಬಂಧ ದಲ್ಲಿ** ನೀಡಿದೆ.
ಆ)	ಪೋಡಿಗಾಗಿ ಸಲ್ಲಿಕೆಯಾಗುವ ಅರ್ಜಿ ಗಳನ್ನು ಇತ್ಯರ್ಥಪಡಿಸಲು ಕಾಲಮಿತಿ ಇದೆಯೇ; ಕಾಲಮಿತಿಯೊಳಗೆ ಅರ್ಜಿ ಗಳನ್ನು ವಿಲೇವಾರಿ ಮಾಡದ ಎಷ್ಟು ಜನ ಅಧಿಕಾರಿಗಳ ವಿರುದ್ಧ ಸಿ.ಸಿ.ಎ. ನಿಯಮಾವಳಿ ಅನ್ವಯ ಕ್ರಮ ಕೈಗೊಳ್ಳಲಾಗಿದೆ;	ಭೂಮಾಪನ ಇಲಾಖೆಯ ದಿನಾಂಕ 16-4-2009 ರ ಸುತ್ತೋಲೆಯ ಪ್ರಕಾರ ತತ್ಕಾಲ್ ಪೋಡಿಗಾಗಿ ಸಲ್ಲಿಕೆಯಾಗುವ ಅರ್ಜಿಗಳು ನಿಯಮಾನುಸಾರ ಅಳತೆಗೆ ಯೋಗ್ಯವಿದ್ದಲ್ಲಿ ಅಂತಹ ಪ್ರಕರಣಗಳನ್ನು 30 ದಿನಗಳಲ್ಲಿ ಇತ್ಯರ್ಥಪಡಿಸಲು ಕಾಲಮಿತಿ ನಿಗದಿಪಡಿಸಲಾಗಿದೆ. ಹಾಸನ ಜಿಲ್ಲೆಯಲ್ಲಿ ಅಳತೆ ಪ್ರಕರಣಗಳ ವಿಲೇವಾರಿ ವಿಳಂಬ ಮಾಡಿರುವ ಮತ್ತು ಕಡಿಮೆ ಪ್ರಗತಿ ಸಾಧಿಸಿರುವ ಕುರಿತು 23 ಜನ ಅಧಿಕಾರಿ/ ಸಿಬ್ಬಂದಿಗಳ ವಿರುದ್ಧ ಶಿಸ್ತು ಕ್ರಮ ಕೈಗೊಳ್ಳಲಾಗಿದೆ.
ಇ)	ಪೋಡಿಗಾಗಿ ಬಾಕಿ ಇರುವ ಅರ್ಜಿಗಳನ್ನು ತ್ವರಿತಗತಿಯಲ್ಲಿ ವಿಲೇವಾರಿ ಮಾಡಲು ಯಾವ ಕ್ರಮಗಳನ್ನು ಕೈಗೊಳ್ಳಲಾಗಿದೆ? (ಹಾಸನ ಜಿಲ್ಲೆಯಲ್ಲಿರುವ ಪೋಡಿ ಮುಕ್ತ ಗ್ರಾಮಗಳ ವಿವರ ನೀಡುವುದು)	**ತತ್ಕಾಲ್ ಪೋಡಿ, ಅರ್ಜಿಗಳ ತ್ವರಿತ ವಿಲೇವಾರಿಗೆ ಸರ್ಕಾರ ಕೈಗೊಂಡ ಕ್ರಮಗಳು** 1) ಭೂಮಾಪನ ಇಲಾಖೆಯಲ್ಲಿ ಅಳತೆ ಕೋರಿ ಸ್ವೀಕೃತವಾಗುವ ಎಲ್ಲಾ ಅರ್ಜಿಗಳನ್ನು ಮೋಜಿಣಿ ತಂತ್ರಾಂಶದ ಮುಖಾಂತರ ಆನ್‌ಲೈನ್‌ನಲ್ಲಿ ಸ್ವೀಕರಿಸಲಾಗುತ್ತಿದ್ದು ತಂತ್ರಾಂಶದ ಪ್ರತಿ ಹಂತದಲ್ಲಿಯೂ FIFO(ಸರದಿ ಸಾಲಿನಂತೆ) ಅಳವಡಿಸಲಾಗಿದೆ. ಪ್ರಕರಣವು ಅಳತೆಗೆ ಯೋಗ್ಯವಾಗಿದ್ದಲ್ಲಿ FIFO(ಸರದಿ ಸಾಲಿನಂತೆ) ಅಳತೆಗಾಗಿ ಭೂಮಾಪಕರಿಗೆ ತಂತ್ರಾಂಶದ ಮೂಲಕ ಆನ್‌ಲೈನ್‌ನಲ್ಲಿ ವಿತರಿಸಲಾಗುತ್ತಿದೆ. ಅಳತೆ ನಂತರ ಆನ್‌ಲೈನ್‌ನಲ್ಲಿ ಕಡತಗಳನ್ನು ಅಪ್‌ಲೋಡ್ ಮಾಡಲು ಹಾಗೂ ಅಪ್‌ಲೋಡ್ ಮಾಡಿರುವ ಕಡತಗಳ ಪರಿಶೀಲನೆ ಮತ್ತು ಅನುಮೋದನೆಯನ್ನು ಸಹ ಆನ್‌ಲೈನ್‌ನಲ್ಲೇ ನಿರ್ವಹಿಸಲಾಗುತ್ತಿದೆ. ತಂತ್ರಾಂಶದ ಮುಖಾಂತರ,

ಪ್ರಕರಣಗಳ ವಿಲೇವಾರಿಯಲ್ಲಿ ಯಾವುದೇ ವಿಳಂಬಕ್ಕೆ ಅವಕಾಶವಿಲ್ಲದಂತೆ ಕ್ರಮವಹಿಸಲಾಗುತ್ತಿದೆ.

2) ಕಂದಾಯ ಇಲಾಖೆಯಿಂದ ಪಹಣಿ ತಿದ್ದುಪಡಿ ಕುರಿತು ಕಂದಾಯ ಅದಾಲತ್ ಗಳನ್ನು ನಡೆಸಲಾಗುತ್ತಿದೆ.

3) ಕಾಲಕಾಲಕ್ಕೆ ವಿಡಿಯೋ ಸಂವಾದ ಮತ್ತು ವಿಭಾಗವಾರು ಅಧಿಕಾರಿಗಳ ಸಭೆ ನಡೆಸಿ ಪ್ರಗತಿ ಪರಿಶೀಲನೆ ಮಾಡಿ ಹೆಚ್ಚಿನ ಪ್ರಗತಿ ಸಾಧಿಸಲು ಸೂಕ್ತ ಮಾರ್ಗದರ್ಶನ ಮತ್ತು ಅಗತ್ಯ ಸೂಚನೆ ನೀಡಲಾಗುತ್ತಿದೆ.

4) ಹೆಚ್ಚಿನ ಪ್ರಕರಣಗಳು ಬಾಕಿ ಇರುವ ತಾಲ್ಲೂಕುಗಳಿಗೆ ಕಡಿಮೆ ಪ್ರಕರಣಗಳು ಬಾಕಿ ಇರುವ ತಾಲ್ಲೂಕಿನಿಂದ ಭೂಮಾಪಕ ರನ್ನು ನಿಯೋಜನೆ ಮಾಡಿ ಪ್ರಕರಣಗಳನ್ನು ವಿಲೇಗೊಳಿಸಲು ಕ್ರಮ ಕೈಗೊಳ್ಳಲಾಗುತ್ತಿದೆ.

5) 11ಇ, ತತ್ಕಾಲ್ ಪೋಡಿ ಇತ್ಯಾದಿ ಪ್ರಕರಣಗಳು ಹೆಚ್ಚಿನ ಸಂಖ್ಯೆ ಯಲ್ಲಿ ಬಾಕಿಯಿರುವುದನ್ನು ಗಮನಿಸಿ, ಹೆಚ್ಚುವರಿಯಾಗಿ 2072 ಪರವಾನಗಿ ಭೂಮಾಪಕರ ಆಯ್ಕೆ ಕುರಿತು ಅರ್ಜಿ ಗಳನ್ನು ಆಹ್ವಾನಿಸಿದ್ದು, ಪರೀಕ್ಷೆಯನ್ನು ನಡೆಸಿ, ಜಿಲ್ಲಾವಾರು ಅರ್ಹ ಅಭ್ಯರ್ಥಿಗಳನ್ನು ಆಯ್ಕೆ ಮಾಡಿ ತರಬೇತಿ ನಂತರ ಉತ್ತೀರ್ಣವಾದ 820 ಜನ ಪರವಾನಗಿ ಭೂಮಾಪಕರನ್ನು ದಿನಾಂಕ 3-9-2021 ರಂದು Counselling ಮೂಲಕ ಸ್ಥಳ ನಿಯುಕ್ತಿಗೊಳಿಸಲಾಗಿದೆ. ಮಾಹೆ ಸಪ್ಟೆಂಬರ್-2021 ರ ಅಂತ್ಯಕ್ಕೆ ಎಲ್ಲಾ ಆಯ್ಕೆಗೊಂಡ ಪರವಾನಗಿ ಭೂಮಾಪಕರುಗಳು ರಾಜ್ಯದ ವಿವಿಧ ನಿಯೋಜಿತ ತಾಲ್ಲೂಕು ಗಳಿಗೆ ಕಾರ್ಯ ನಿರ್ವಹಿಸಲಿದ್ದಾರೆ.

ಇದರಿಂದ ಬಾಕಿ ಪ್ರಕರಣಗಳನ್ನು ಶೀಘ್ರವಾಗಿ ವಿಲೇವಾರಿ ಮಾಡಲು ಸಾಧ್ಯವಾಗುತ್ತದೆ

ಹಾಸನ ಜಿಲ್ಲೆಯಲ್ಲಿರುವ ಪೋಡಿ ಮುಕ್ತ ಯೋಜನೆಯಡಿ ಅಳತೆ ಪೂರ್ಣಗೊಂಡ ಗ್ರಾಮಗಳ ವಿವರ

ಕ್ರ	ಜಿಲ್ಲೆ	ತಾಲ್ಲೂಕು	ಅಳತೆ ಪೂರ್ಣಗೊಂಡ ಗ್ರಾಮಗಳ ಸಂಖ್ಯೆ
1	ಹಾಸನ	ಆಲೂರು	264
2	ಹಾಸನ	ಅರಕಲಗೋಡು	173
3	ಹಾಸನ	ಬೇಲೂರು	220
4	ಹಾಸನ	ಅರಸೀಕೆರೆ	159
5	ಹಾಸನ	ಚನ್ನರಾಯಪಟ್ಟಣ	84
6	ಹಾಸನ	ಹೊಳೆನರಸೀಪುರ	98
7	ಹಾಸನ	ಹಾಸನ	73
8	ಹಾಸನ	ಸಕಲೇಶಪುರ	142
		ಒಟ್ಟು	1213

		ಹಾಸನ ಜಿಲ್ಲೆಯ ಒಟ್ಟು 2585 ಗ್ರಾಮಗಳಲ್ಲಿ 1213 ಗ್ರಾಮಗಳನ್ನು ಪೋಡಿ ಮುಕ್ತ ಯೋಜನೆಯಡಿ ಆಯ್ಕೆ ಮಾಡಿಕೊಂಡು ಅಳತೆ ಪೂರೈಸಲಾಗಿದೆ. ಉಳಿದಂತೆ ಎಲ್ಲಾ ಗ್ರಾಮಗಳನ್ನು ಜಿಲ್ಲೆಯಲ್ಲಿ ಸಾರ್ವಜನಿಕರು ದೈನಂದಿನ ಅಳತೆ ಕಾರ್ಯಗಳಿಗೆ ಆದ್ಯತೆ ನೀಡಿ ಸದರಿ ಕಾರ್ಯಗಳನ್ನು ಪೂರೈಸಲು ಅವಶ್ಯಕವಾದ ಭೂಮಾಪಕರನ್ನು ಹೊರತುಪಡಿಸಿ ಉಳಿದ ಭೂಮಾಪಕರುಗಳನ್ನು ಬಳಸಿಕೊಂಡು ವಿಧಾನಸಭಾ ಕ್ಷೇತ್ರವಾರು ಗ್ರಾಮಗಳನ್ನು ಹಂತ ಹಂತವಾಗಿ ಕನಿಷ್ಠ 10 ಗ್ರಾಮಗಳನ್ನು ಅಳತೆಗೆ ಆಯ್ಕೆ ಮಾಡಿಕೊಂಡು ಪೋಡಿ ಮುಕ್ತ ಗ್ರಾಮ ಯೋಜನೆಯನ್ನು ಅನುಷ್ಠಾನಗೊಳಿಸಲಾಗುತ್ತಿದೆ.

ಸಂಖ್ಯೆ: ಕಂಇ 158 ಎಸ್‌ಎಸ್‌ಸಿ 2021

(ಆರ್.ಅಶೋಕ)
ಕಂದಾಯ ಸಚಿವರು

ಅನುಬಂಧ								LCQ--1172
ಕಳೆದ 3 ವರ್ಷಗಳಿಂದ (2019-2022)ಹಾಸನ ಜಿಲ್ಲೆಯಲ್ಲಿ ಪೋಡಿಗಾಗಿ ಸಲ್ಲಿಕೆಯಾಗಿರುವ ಅರ್ಜಿಗಳ ಪ್ರಗತಿ								
ಕ್ರ	ಜಿಲ್ಲೆ	ಪ್ರಾ.ಶಿಲ್ಕು	ಸ್ವೀಕೃತಿ	ಒಟ್ಟು	ವಿಲೇ	ಬಾಕಿ	ಕಂದಾಯ ಶಾಖೆಯಲ್ಲಿ ಬಾಕಿ	ಭೂಮಾಪನ ಶಾಖೆಯಲ್ಲಿ ಬಾಕಿ
1	ಹಾಸನ	ಸಕಲೇಶಪುರ	221	689	630	280	134	146
2	ಹಾಸನ	ಬೇಲೂರು	223	1176	1097	302	63	239
3	ಹಾಸನ	ಅರಸೀಕೆರೆ	439	2221	1991	669	357	312
4	ಹಾಸನ	ಹಾಸನ	776	4026	2952	1850	872	978
5	ಹಾಸನ	ಆಲೂರು	108	504	424	188	71	117
6	ಹಾಸನ	ಅರಕಲಗೂಡು	272	1370	1331	311	98	213
7	ಹಾಸನ	ಹೊಳೆನರಸೀಪುರ	271	1294	1235	330	102	228
8	ಹಾಸನ	ಚನ್ನರಾಯಪಟ್ಟಣ	769	5448	4749	1468	427	1041
	ಹಾಸನ Total		**3079**	**16728**	**14409**	**5398**	**2124**	**3274**